SHRIDHARA H D
Digitally signed by SHRIDHARA H D
Date: 2026.04.10 10:35:34 +0530

KACD320022102022

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್ ಸಿ ರವರ
ನ್ಯಾಯಾಲಯ, ಹಿರಿಯೂರು

**ಉಪಸ್ಥಿತರು : ಶ್ರೀ. ಶ್ರೀಧರ ಹೆಚ್ ಡಿ**

ಬಿ.ಎ., ಎಲ್.ಎಲ್.ಬಿ.
ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್ ಸಿ, ಹಿರಿಯೂರು,.

**ಸಿ.ಸಿ. ನಂ.1380/ 2024**

ದಿನಾಂಕ 09 ನೇ ಏಪ್ರಿಲ್ 2026

ಪಿರ್ಯಾದುದಾರರು: ಅಬ್ಬಿನಹೊಳೆ ಪೊಲೀಸ್ ಠಾಣೆ
ಹಿರಿಯೂರು ತಾಲ್ಲೂಕು
(ಸಹಾಯಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿತ/ರು : 1) ಹೇಮಂತರಾಜು @ ರಾಜು ಬಿನ್ ಲೇಟ್
ಬಿನ್ ಲೇಟ್ ಹನುಮಂತರಾಯಪ್ಪ,
ಸುಮಾರು 23 ವರ್ಷ,
ವಾಸಃ ನಿದರಗಟ್ಟ ಗ್ರಾಮ,
ಅಮರಾಪುರಂ ಮಂಡಲಂ,
ಅನಂತಪುರ.

2) ಶಿವಪ್ರಸಾದ್.ಕೆ.ಎಂ.
ಬಿನ್ ಕೇಶವಮೂರ್ತಿ.ಕೆ.ಸಿ,
ಸುಮಾರು 40 ವರ್ಷ,
ವಾಸಃ ಕೆಂಕೆರೆ ಗ್ರಾಮ,
ಚಿಕ್ಕನಾಯಕನಹಳ್ಳಿ ತಾಲ್ಲೂಕು,
ತುಮಕೂರು ಜಿಲ್ಲೆ,

**(1 ನೇ ಆರೋಪಿ ಪರ ಶ್ರೀ.ಜಿ.ಸಿ.ಪಿ., ವಕೀಲರು)**
**(2 ನೇ ಆರೋಪಿ ಪರ ಶ್ರೀ.ಎಂ.ಆರ್.ಪಿ, ವಕೀಲರು)**

| | | | |
|---|---|---|---|
| 01 | ಅಪರಾಧವು ಘಟಿಸಿದ ದಿನಾಂಕ | :- | 19.05.2022 |
| 02 | ಅಪರಾಧವನ್ನು ವರದಿ ಮಾಡಿದ ದಿನಾಂಕ | :- | 19.05.2022 |
| 03 | ದೂರುದಾರನ ಹೆಸರು | :- | ಸಿದ್ದೇಶ |
| 04 | ಸಾಕ್ಷಿದಾರರ ವಿಚಾರಣೆ ಪ್ರಾರಂಭವಾದ ದಿನಾಂಕ | :- | 19.02.2025 |
| 05 | ಸಾಕ್ಷಿದಾರರ ವಿಚಾರಣೆ ಮುಕ್ತಾಯವಾದ ದಿನಾಂಕ | :- | 20.11.2025 |
| 06 | ಅಪರಾಧಗಳ ಕಲಂ ಗಳು | :- | ಭಾ. ದಂ. ಸಂ. ಕಲಂ 279, 337 ಮತ್ತು 304A ಹಾಗೂ ಮೋಟಾರ್ ವಾಹನಗಳ ಕಾಯ್ದೆ ಕಲಂಃ 3 ಸಹ ಕಲಂಃ181 ಕಲಂಃ 146 ಸಹ ಕಲಂಃ196 ಮತ್ತು ಕಲಂಃ 5 ಸಹ ಕಲಂಃ180 |
| 07 | ನ್ಯಾಯಾಧೀಶರ ಅಂತಿಮ ನಿರ್ಣಯ | :- | ಖುಲಾಸೆ ಮಾಡಲಾಗಿದೆ |

SHRIDHARA H D
Digitally signed by SHRIDHARA H D
Date: 2026.04.10 10:35:45 +0530

**(ಶ್ರೀಧರ ಹೆಚ್ ಡಿ)**
ಸಿ/ಸಿ ಅಪರ ಸಿವಿಲ್ ಮತ್ತು ಜೆ.ಎಂ. ಎಫ್. ಸಿ
ನ್ಯಾಯಾಧೀಶರು ಹಿರಿಯೂರು.

**:-ತೀರ್ಪು -:**

ಹಿರಿಯೂರು ತಾಲ್ಲೂಕು, ಅಬ್ಬಿನಹೋಳೆ ಪೊಲೀಸ್ ಠಾಣೆ, ಐಮಂಗಲ ವೃತ್ತ ನಿರೀಕ್ಷಕರು ಆರೋಪಿತರ ವಿರುದ್ಧ ಭಾ. ದಂ. ಸಂ. ಕಲಂಃ279, 337 ಮತ್ತು 304A ಹಾಗೂ ಮೋಟಾರ್ ವಾಹನಗಳ ಕಾಯ್ದೆ ಕಲಂಃ3 ಸಹಕಲಂಃ 181 ಕಲಂಃ 146 ಸಹ ಕಲಂಃ196 ಮತ್ತು ಕಲಂಃ 5 ಸಹ ಕಲಂಃ180 ರಡಿಯಲ್ಲಿ ಈ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ವೇನೆಂದರೆಃ–**

ದಿನಾಂಕ: 19.05.2022 ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಧರ್ಮಪುರ ಕೆರೆಯ ಏರಿಯ ಪಕ್ಕ ಬಡಜ್ಜಿರವರ ಜಮೀನಿನ ಮುಂಭಾಗ ಪಿ.ಡಿ ಕೋಟೆ ಕಡೆಯಿಂದ ಧರ್ಮಪುರ ಕಡೆಗೆ ಹೋಗುವ ಎಸ್ ಹೆಚ್–24 ರಸ್ತೆಯಲ್ಲಿ, 1 ನೇ ಆರೋಪಿ ವಾಹನ ಸಂಃಕೆಎ–02–ಇಹೆಚ್–4137 ನೇ ಮೋಟಾರ್ ಸೈಕಲ್‌ನ್ನು ಧರ್ಮಪುರದ ಕಡೆಯಿಂದ ಪಿ.ಡಿ.ಕೋಟೆ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಪಿ.ಡಿ ಕೋಟೆ ಕಡೆಯಿಂದ ಬರುತ್ತಿದ್ದ ವಾಹನ ಸಂಃಕೆಎ–16–ಎಕ್ಸ್–5862 ನೇ ಮೋಟಾರ್ ಸೈಕಲ್ ಗೆ ಡಿಕ್ಕಿ ಹೊಡೆಸಿದ ಪರಿಣಾಮ ವಾಹನ ಸಂಃಕೆಎ–16–ಎಕ್ಸ್–5862 ನೇ ಮೋಟಾರ್ ಸೈಕಲ್ ಚಾಲನೆ ಮಾಡುತ್ತಿದ್ದ ಶಿವಮೂರ್ತಿ ತಂದೆ ಕದುರಪ್ಪ ರವರಿಗೆ ತಲೆಗೆ ಮೈಕೈಗೆ ಪೆಟ್ಟುಗಳು ಬಿದ್ದು ರಕ್ತಗಾಯಗಳಾಗಿದ್ದು, ಚಿಕಿತ್ಸೆಗಾಗಿ ಧರ್ಮಪುರ ಸರ್ಕಾರಿ ಆಸ್ಪತ್ರೆ ನಂತರ ವೈದ್ಯರ ಸಲಹೆ ಮೇರೆಗೆ ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ಮಧ್ಯಾಹ್ನ 12.10 ಗಂಟೆಗೆ ಕರೆದುಕೊಂಡು ಹೋದಾಗ ಪರೀಕ್ಷಿಸಿದ ವೈದ್ಯರು ಮೃತಪಟ್ಟಿರುವುದಾಗಿ ತಿಳಿಸಿದ್ದು, ಸದರಿ ಮೋಟಾರ್ ಸೈಕಲ್‌ನ ಹಿಂದೆ ಕುಳಿತು ಕೊಂಡಿದ್ದ ಚಾಸಾ–3, ಚಾಸಾ–4 ರವರಿಗೆ ಮೈಕೈಗೆ ಪೆಟ್ಟುಗಳು ಬಿದ್ದು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ವಾಹನ ಸಂಃಕೆಎ–02–ಇಹೆಚ್–4137 ನೇ ಮೋಟಾರ್ ಸೈಕಲ್ ನ ಹಿಂದೆ ಕುಳಿತಿದ್ದ ಚಾಸಾ–5 ರವರಿಗೆ ಮೈ ಕೈಗೆ ಪೆಟ್ಟುಗಳು ಬಿದ್ದು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. 1 ನೇ ಆರೋಪಿಯು ತನಗೆ ಚಾಲನಾ ಪರವಾನಿಗೆ ಹೊಂದದೆ ವಾಹನ ಸಂಃಕೆಎ–02–ಇಹೆಚ್–4137 ನೇ ಮೋಟಾರ್ ಸೈಕಲ್ ಸಾರ್ವಜನಿಕ ಸ್ಥಳದಲ್ಲಿ ಚಾಲನೆ ಮಾಡಿದ್ದು, 2 ಆರೋಪಿ ತನ್ನ ಬಾಬ್ತು ಕೆಎ–02–ಇಹೆಚ್–4137 ನೇ ಮೋಟಾರ್ ಸೈಕಲ್ ಗೆ ವಾಹನ ವಿಮೆಯನ್ನು ಹೊಂದದೆ, ಚಾಲನಾ ಪರವಾನಿಗೆ ಇಲ್ಲದೆ ಇರುವ 1 ನೇ ಆರೋಪಿಗೆ ಚಾಲನೆ ಮಾಡಲು ಕೊಟ್ಟಿರುತ್ತಾನೆ ಎಂಬುದಾಗಿರುತ್ತದೆ.

3. ಸದರಿ ದೂರಿನನ್ವಯ ಅಬ್ಬಿನಹೊಳೆ ಪೋಲೀಸರು ಠಾಣಾ ಮೊಕದ್ದಮೆ ಸಂಖ್ಯೆ. 48/2022 ರಲ್ಲಿ ಭಾ. ದಂ. ಸಂ. ಕಲಂ 279, 337 ಮತ್ತು 304A ಹಾಗೂ ಮೋಟಾರ್ ವಾಹನಗಳ ಕಾಯ್ದೆ ಕಲಂಃ 3 ಸಹಕಲಂಃ181, ಕಲಂಃ 146 ಸಹ ಕಲಂಃ196 ಮತ್ತು ಕಲಂಃ 5 ಸಹ ಲಂಃ180 ರಡಿಯಲ್ಲಿ ಆರೋಪಿತರ

ವಿರುದ್ಧ ಪ್ರಕರಣ ದಾಖಲು ಮಾಡಿ ಕೊಂಡಿರುತ್ತಾರೆ. ನಂತರ ಐಮಂಗಲ ವೃತ್ತ ನಿರೀಕ್ಷಕರು ತನಿಖೆಯನ್ನು ಪೂರೈಸಿ ನಂತರ ಆರೋಪಿತರ ವಿರುದ್ಧ ಭಾ. ದಂ. ಸಂ. ಕಲಂಃ279, 337 ಮತ್ತು 304A ಹಾಗೂ ಮೋಟಾರ್ ವಾಹನಗಳ ಕಾಯ್ದೆ ಕಲಂಃ 3 ಸಹಕಲಂಃ181 ಕಲಂಃ 146 ಸಹಕಲಂಃ196 ಮತ್ತು ಕಲಂಃ 5 ಸಹಕಲಂಃ180 ರಡಿಯಲ್ಲಿ ಈ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿದೆ.

4. ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಆರೋಪಿತರ ವಿರುದ್ಧ ಭಾ. ದಂ. ಸಂ. ಕಲಂಃ279, 337 ಮತ್ತು 304A ಹಾಗೂ ಮೋಟಾರ್ ವಾಹನಗಳ ಕಾಯ್ದೆ ಕಲಂಃ 3 ಸಹ ಕಲಂಃ181 ಕಲಂಃ 146 ಸಹ ಕಲಂಃ196 ಮತ್ತು ಕಲಂಃ 5 ಸಹ ಕಲಂಃ180 ರಡಿಯಲ್ಲಿ ಮಾಡಲಾದ ಅಪರಾಧಗಳ ಬಗ್ಗೆ ಸಂಜ್ಞೆತೆಯನ್ನು ತೆಗೆದುಕೊಳ್ಳಲಾಯಿತು. ನ್ಯಾಯಾಲಯದಿಂದ ಆರೋಪಿತರಿಗೆ ಸಮನ್ಸ್ ನೀಡಲಾಗಿ ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ವಕೀಲರನ್ನು ನೇಮಿಸಿಕೊಂಡು ನ್ಯಾಯಾಲಯದಿಂದ ಜಾಮೀನು ಪಡೆದು ಕೊಂಡಿರುತ್ತಾರೆ.

5. ದಂಡ ಪ್ರಕ್ರಿಯ ಸಂಹಿತೆ ಕಲಂಃ207 ರಡಿಯಲ್ಲಿ ದೋಷಾರೋಪಣಾ ಪಟ್ಟಿಯ ನಕಲನ್ನು ಆರೋಪಿತರಿಗೆ ನೀಡಿ, ನಂತರ ಆರೋಪಿತರ ಪರ ವಕೀಲರು ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರ ವಾದ ಆಲಿಸಿ, ಆರೋಪಿತರ ವಿರುದ್ಧ ಭಾ. ದಂ. ಸಂ. ಕಲಂಃ279, 337 ಮತ್ತು 304A ಹಾಗೂ ಮೋಟಾರ್ ವಾಹನಗಳ ಕಾಯ್ದೆ ಕಲಂಃ 3 ಸಹಕಲಂಃ181 ಕಲಂಃ 146 ಸಹಕಲಂಃ196 ಮತ್ತು ಕಲಂಃ 5 ಸಹಕಲಂಃ180 ರಡಿಯಲ್ಲಿ ದೋಷಾರೋಪಣೆ ಯನ್ನು ರಚಿಸಿ ಆರೋಪಿತರಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ, ಹೇಳಿ ವಿವರಿಸಲಾಗಿ, ಆರೋಪಿತರು ತನ್ನ ವಿರುದ್ಧದ ಆರೋಪಣೆಯನ್ನು ಅಲ್ಲಗಳೆದು ವಿಚಾರಣೆಯಾಗಬೇಕೆಂದು ಕೇಳಿ ಕೊಂಡಿರುತ್ತಾರೆ.

6. ಆರೋಪಿತರ ಮೇಲಿನ ಆರೋಪಗಳನ್ನು ಸಾಭೀತು ಪಡಿಸುವ ಸಲುವಾಗಿ ಅಭಿಯೋಜನೆಯು ಒಟ್ಟು 10 ಸಾಕ್ಷಿದಾರರನ್ನು ಪ್ರಾಸಾ-1 ರಿಂದ 10 ರಂತೆ ವಿಚಾರಣೆಗೆ ಒಳಪಡಿಸಿ ಕೊಂಡು, ಒಟ್ಟು 20 ದಾಖಲಾತಿಗಳನ್ನು ನಿಪಿ-1 ರಿಂದ 20 ರಂತೆ ಗುರುತಿಸಿ ಕೊಂಡಿರುತ್ತದೆ.

7. ಅಭಿಯೋಜನೆಯ ಸಾಕ್ಷ್ಯ ವಿಚಾರಣೆ ಮುಕ್ತಾಯದ ನಂತರ ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆಗಳನ್ನು ದಾಖಲು ಮಾಡಿಕೊಳ್ಳಲಾಯಿತು, ಆರೋಪಿತರು ತಮ್ಮ ವಿರುದ್ಧದ ಅಭಿಯೋಜನೆಯ ಸಾಕ್ಷ್ಯವನ್ನು ಅಲ್ಲಗಳೆದು, ತಮ್ಮ ಪರವಾಗಿ ಪ್ರತಿವಾದ ಸಾಕ್ಷ್ಯ ಮಂಡಿಸುವುದಿಲ್ಲ ಎಂದು ನುಡಿದಿರುತ್ತಾರೆ.

8. ಪ್ರಕರಣದಲ್ಲಿ ಉಭಯ ಪಕ್ಷಕಾರರ ವಾದ ಆಲಿಸಿ ಕಡತ ಪರಿಶೀಲಿಸಿದ ನಂತರ ಈ ಕೆಳಗಿನ ನಿರ್ಣಯಾಂಶಗಳು ಉದ್ಭವಿಸಿವೆ .

: **ಅಂಶಗಳು** :

1. ದಿನಾಂಕ: 19.05.2022 ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಧರ್ಮಪುರ ಕೆರೆಯ ಏರಿಯ ಪಕ್ಕ ಬಡಜ್ಜಿರವರ ಜಮೀನಿನ ಮುಂಭಾಗ ಪಿ.ಡಿ ಕೋಟೆ ಕಡೆಯಿಂದ ಧರ್ಮಪುರ ಕಡೆಗೆ ಹೋಗುವ ಎಸ್ ಹೆಚ್–24 ರಸ್ತೆಯಲ್ಲಿ, 1 ನೇ ಆರೋಪಿ ತನ್ನ ಬಾಬ್ತು ವಾಹನ ಸಂಃಕೆಎ–02–ಇಹೆಚ್–4137 ನೇ ಮೊಟಾರ್ ಸೈಕಲ್‌ನ್ನು ಧರ್ಮಪುರದ ಕಡೆಯಿಂದ ಪಿ.ಡಿ.ಕೋಟೆ ಕಡೆಗೆ ಮಾನವ ಜೀವಕ್ಕೆ ಅಪಾಯ ಕಾರಿಯಾಗುವಂತೆ ಅತಿವೇಗವಾಗಿ ಮತ್ತು ಅಜಾಗರೂಕತೆ ಯಿಂದ ಚಾಲನೆ ಮಾಡಿಕೊಂಡು ಬಂದು ವಾಹನ ಸಂಃಕೆಎ–16–ಎಕ್ಸ್–5862 ಮೋಟಾರ್ ಸೈಕಲ್‌ಗೆ ಡಿಕ್ಕಿ ಪಡಿಸುವ ಮೂಲಕ ಭಾ ದಂ ಸಂ ಕಲಂಃ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾನೆ ಎಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸುತ್ತದೆಯೆ?

2. ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸಮಯದಲ್ಲಿ 1 ನೇ ಆರೋಪಿತನು ಅತಿವೇಗ ಮತ್ತು ಅಜಾಗರೂಕತೆಯಿಂದ ನಡೆಸಿಕೊಂಡು ಬಂದು ಪಿ.ಡಿ ಕೋಟೆ ಕಡೆಯಿಂದ ಬರುತ್ತಿದ್ದ ಕೆಎ–16–ಎಕ್ಸ್–5862 ನೇ ಮೋಟಾರ್ ಸೈಕಲ್ ಗೆ ಡಿಕ್ಕಿ ಪಡಿಸಿ ಪರಿಣಾಮ ವಾಹನ ಸಂಃಕೆಎ–16–ಎಕ್ಸ್–5862 ನೇ ಮೋಟಾರ್ ಸೈಕಲ್‌ನ ಹಿಂದೆ ಕುಳಿತುಕೊಂಡಿದ್ದ ಚಾಸಾ–3,

ಚಾಸಾ-4 ರವರಿಗೆ ಮೈಕೈಗೆ ಪೆಟ್ಟುಗಳು ಬಿದ್ದು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು ಹಾಗೂ ವಾಹನ ಸಂಃಕೆಎ-02-ಇಹೆಚ್-4137 ನೇ ಮೋಟಾರ್ ಸೈಕಲ್ ನ ಹಿಂದೆ ಕುಳಿತಿದ್ದ ಚಾಸಾ-5 ರವರಿಗೆ ಮೈ ಕೈಗೆ ಪೆಟ್ಟುಗಳು ಬಿದ್ದು ಸಾಮಾನ್ಯ ಸ್ವರೂಪದ ಗಾಯಗಳುಂಟು ಮಾಡುವ ಮೂಲಕ ಭಾ ದಂ ಸಂ ಕಲಂ 337 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾನೆಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸುತ್ತದೆಯೆ?

3. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ನೇ ಆರೋಪಿತನು ವಾಹನ ಸಂಃಕೆಎ-02-ಇಹೆಚ್-4137 ನೇ ಮೊಟಾರ್ ಸೈಕಲ್‌ನ್ನು ಧರ್ಮಪುರದ ಕಡೆಯಿಂದ ಪಿ.ಡಿ.ಕೋಟೆ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಪಿ.ಡಿ ಕೋಟೆ ಕಡೆಯಿಂದ ಬರುತ್ತಿದ್ದ ವಾಹನ ಸಂಃಕೆಎ-16-ಎಕ್ಸ್-5862 ನೇ ಮೋಟಾರ್ ಸೈಕಲ್ ಗೆ ಡಿಕ್ಕಿ ಹೊಡೆಸಿದ ಪರಿಣಾಮ ವಾಹನ ಸಂಃಕೆಎ-16-ಎಕ್ಸ್-5862 ನೇ ಮೋಟಾರ್ ಸೈಕಲ್ ಚಾಲನೆ ಮಾಡುತ್ತಿದ್ದ ಶಿವಮೂರ್ತಿ ತಂದೆ ಕದುರಪ್ಪ ರವರಿಗೆ ತಲೆಗೆ ಮೈಕೈಗೆ ಪೆಟ್ಟುಗಳು ಬಿದ್ದು ರಕ್ತಗಾಯಗಳಾಗಿ ಮೃತ ಪಡುವಂತೆ ಮಾಡುವ ಆ ಮೂಲಕ ಭಾ ದಂ.ಸಂ.ಕಲಂ.304A ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾನೆಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸುತ್ತದೆಯೆ?

4. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ನೇ ಆರೋಪಿತನು 2 ನೇ ಆರೋಪಿತನ ಬಾಬ್ತು ವಾಹನ ಸಂಃಕೆಎ-02-ಇಹೆಚ್-4137 ನೇ ಮೋಟಾರ್ ಸೈಕಲ್ ಯಾವುದೇ ಚಾಲನಾ ಪರವಾನಿಗೆಯನ್ನು ಹೊಂದದೆ ಸಾರ್ವಜನಿಕ ಸ್ಥಳದಲ್ಲಿ ಚಾಲನೆ ಮಾಡುವ ಭಾ.ಮೋ.ವಾ. ಕಾಯ್ದೆ ಕಲಂಃ 3 ಸಹ ಕಲಂಃ181 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾನೆ

ಎಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸುತ್ತದೆಯೆ?

5. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 2 ನೇ ಆರೋಪಿತನ ಬಾಬ್ತು ವಾಹನ ಸಂಃಕೆಎ-02-ಇಹೆಚ್-4137 ನೇ ಮೋಟಾರ್ ಸೈಕಲ್‌ಗೆ ಯಾವುದೇ ವಾಹನ ವಿಮೆ ಸೌಲಭ್ಯವನ್ನು ಹೊಂದದೆ 1 ನೇ ಆರೊಪಿಗೆ ಸಾರ್ವಜನಿಕ ಸ್ಥಳದಲ್ಲಿ ಚಾಲನೆ ಮಾಡಲು ನೀಡುವ ಮೂಲಕ ಭಾ.ಮೋ.ವಾ. ಕಾಯ್ದೆ ಕಲಂಃ 146 ಸಹ ಕಲಂಃ196 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾನೆ ಎಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸುತ್ತದೆಯೆ?

6. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 2 ನೇ ಆರೋಪಿತನು ತನ್ನ ಬಾಬ್ತು ವಾಹನ ಸಂಃಕೆಎ-02-ಇಹೆಚ್-4137 ನೇ ಮೋಟಾರ್ ಸೈಕಲ್ಲು ಯಾವುದೇ ಚಾಲನಾ ಪರವಾನಿಗೆಯನ್ನು ಹೊಂದದೆ ಇರುವ 1 ನೇ ಆರೋಪಿಗೆ ಸಾರ್ವಜನಿಕ ಸ್ಥಳದಲ್ಲಿ ಚಾಲನೆ ಮಾಡಲು ನೀಡುವ ಮೂಲಕ ಭಾ.ಮೋ.ವಾ. ಕಾಯ್ದೆ ಕಲಂಃ 5 ಸಹ ಕಲಂಃ180 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾನೆ ಎಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸುತ್ತದೆಯೆ?

7. ಏನು ಆದೇಶ ?

9. ಈ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿದೆ.

ಅಂಶ 1:- ನಕಾರಾತ್ಮಕವಾಗಿ,

ಅಂಶ 2:- ನಕಾರಾತ್ಮಕವಾಗಿ,

ಅಂಶ 3:- ನಕಾರಾತ್ಮಕವಾಗಿ,

ಅಂಶ 4:- ನಕಾರಾತ್ಮಕವಾಗಿ,

ಅಂಶ 5:- ನಕಾರಾತ್ಮಕವಾಗಿ,

ಅಂಶ 6:- ನಕಾರಾತ್ಮಕವಾಗಿ,

ಅಂಶ 7:- ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶ,

**ಕಾ ರ ಣ ಗ ಳು**

10. **ಅಂಶ 1 ರಿಂದ 6 :-** ಈ ಐದು ಅಂಶಗಳು ಏಕಘಟನೆಯಿಂದ ಉದ್ಭವಿಸಿರುವುದರಿಂದ ಚರ್ಚೆಯ ಪುನರಾವರ್ತನೆ ತಪ್ಪಿಸುವ ಸಲುವಾಗಿ ಈ ಐದು ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಯಿತು.

11. ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವನ್ನು ಈಗಾಗಲೇ ಹೇಳಲಾಗಿರುತ್ತದೆ. ಫ್ರಾಸಾ-1 ಏಕಾಂತಪ್ಪ ಸಾಂದರ್ಭಿಕ ಸಾಕ್ಷಿದಾರರು, ಫ್ರಾಸಾ-2 ಕಾಟಮ್ಮ ಪ್ರತ್ಯಕ್ಷ ಸಾಕ್ಷಿದಾರರು, ಫ್ರಾಸಾ-3 ಸಿದ್ದೇಶ್ ದೂರುದಾರರು, ಫ್ರಾಸಾ-4 ಗುರುಸ್ವಾಮಿ ಮತ್ತು ಫ್ರಾಸಾ-5 ಮಧು ಪಂಚನಾಮೆ ಸಾಕ್ಷಿದಾರರು, ಫ್ರಾಸಾ-6 ಸಿದ್ದಾರ್ಥ್ ಮತ್ತು ಫ್ರಾಸಾ-7 ರಂಗಸ್ವಾಮಿ ಇವರು ಪ್ರತ್ಯಕ್ಷ ಸಾಕ್ಷಿದಾರರು, ಫ್ರಾಸಾ-10 ರಂಗನಾಥ. ಕೆ ಸ್ವತಂತ್ರ ಸಾಕ್ಷಿದಾರರು, ಫ್ರಾಸಾ-8 ರಾಘವೇಂದ್ರ. ಕೆ. ಆರ್, ಫ್ರಾಸಾ-9 ಜೆ. ರೆಹಮತ್ ಉಲ್ಲಾ ಇವರುಗಳು ಪೋಲಿಸ್ ಅಧಿಕಾರಿಗಳು/ ತನಿಖಾಧಿಕಾರಿಗಳು ಇರುತ್ತಾರೆ. ನಿಪಿ-1 ಫ್ರಾಸಾ-1 ರವರ ಹೇಳಿಕೆ, ನಿಪಿ-2 ಫ್ರಾಸಾ-2 ರವರ ಹೇಳಿಕೆ, ನಿಪಿ-3 ದೂರು, ನಿಪಿ-4 ಕೃತ್ಯ ನಡೆದ ಸ್ಥಳ ಪಂಚನಾಮೆ, ನಿಪಿ-5 ಕಬ್ಜಾನಕಾಶೆ, ನಿಪಿ-6 ಫ್ರಾಸಾ-1 ರವರ ಮರು ಹೇಳಿಕೆ, ನಿಪಿ-7 ಫ್ರಾಸಾ-6 ರವರ ಹೇಳಿಕೆ, ನಿಪಿ-8 ಫ್ರಾಸಾ-7 ರವರ ಹೇಳಿಕೆ, ನಿಪಿ-9 ಶವ ತನಿಖಾ ವರದಿ, ನಿಪಿ-10 ಶವಪರೀಕ್ಷಾ ವರದಿ, ನಿಪಿ-11 ಐ ಎಂ ವಿ ವರದಿ, ನಿಪಿ-12 ರಿಂದ 15 ಗಾಯಾದ ಪ್ರಮಾಣ ಪತ್ರಗಳು, ನಿಪಿ-16 ಮಾಲು ಪಟ್ಟಿ ನಿಪಿ-17 ಇಂಡೆಮ್ನಿಟಿ ಬಾಂಡ್, ನಿಪಿ-18 ಕಲಂಃ133 ಐಎಂವಿ ರೀತ್ಯ ಪೊಲೀಸ್ ನೋಟೀಸ್, ನಿಪಿ-19 ಕಲಂಃ133 ಐಎಂವಿ ರೀತ್ಯ ಪೊಲೀಸ್ ನೋಟೀಸ್‌ಗೆ ಉತ್ತರ, ನಿಪಿ-20 ಪ್ರಥಮ ವರ್ತಮಾನ ವರದಿ ಇರುತ್ತವೆ.

12. ಫ್ರಾಸಾ-1 ಏಕಾಂತಪ್ಪ ಇವರು ಸಾಂದರ್ಭಿಕ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಮೃತ ಶಿವಮೂರ್ತಿ ತನಗೆ ಪರಿಚಯು ಇಲ್ಲ. ಚಾಸಾ-1, 3 ರಿಂದ 5 ರವರ ಪರಿಚಯ ಇಲ್ಲ. ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ

ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ–1 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದ ಅಂಶಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ.

13. ಫ್ರಾಸಾ–2 ಕಾಟಮ್ಮ ಇವರು ಪ್ರತ್ಯಕ್ಷ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಮೃತ ಶಿವಮೂರ್ತಿ ತನಗೆ ಪರಿಚಯ ಇದೆ. ಅವರು ಅಪಘಾತದಲ್ಲಿ ಮರಣ ಹೊಂದಿರುತ್ತಾರೆ. ಚಾಸಾ–1, 2, 4 ಮತ್ತು 5 ರವರ ಪರಿಚಯ ಇದೆ. ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ–2 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದ ಅಂಶಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ.

14. ಫ್ರಾಸಾ–3 ಸಿದ್ದೇಶ್ ಇವರು ದೂರುದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಮೃತ ಶಿವಮೂರ್ತಿ ತನ್ನ ಅಣ್ಣ. ಅವರು ರಸ್ತೆ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. ಸುಮಾರು ಎರಡು ವರ್ಷಗಳ ಹಿಂದೆ ಧರ್ಮಪುರದ ಕೆರೆ ಏರಿ ಬಳಿ ತನ್ನ ಅಣ್ಣ ಶಿವಮೂರ್ತಿಗೆ ಅಪಘಾತವಾಗಿದೆ ಎಂದು ಕುರಿ ಕಾಯುವವರು ಫೋನ್ ಮಾಡಿ ತಿಳಿಸಿದರು. ತಾನು ಸ್ಥಳಕ್ಕೆ ಹೋಗುವುದರಲ್ಲಿ ತನ್ನ ಅಣ್ಣನನ್ನು ಹಿರಿಯೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ತಾನು ಪೋಲಿಸ್ ಠಾಣೆಗೆ ಹೋಗುವಷ್ಟರಲ್ಲಿ ದೂರನ್ನು ಬರೆದಿದ್ದರು. ಅದಕ್ಕೆ ತಾನು ಸಹಿ ಮಾಡಿರುತ್ತೇನೆ. ನಿಪಿ–3 ರಲ್ಲಿರುವ ವಿಚಾರಗಳು ತನಗೆ ಗೊತ್ತಿಲ್ಲ. ನಿಪಿ–4 ಮತ್ತು 5 ಕ್ಕೆ ಅಪಘಾತವಾದ ಸ್ಥಳದಲ್ಲಿ ಸಹಿ ಮಾಡಿರತ್ತೇನೆ. ನಿಪಿ–4 ಮತ್ತು 5 ರಲ್ಲಿರುವ ವಿಚಾರಗಳು ತನಗೆ ಗೊತ್ತಿಲ್ಲ. ತನ್ನ ಸಮಕ್ಷಮ ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈ ಕುರಿತು ತಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಈ ಅಪಘಾತಕ್ಕೆ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಕಾರಣ ಆಗಿದ್ದಾರೆ. ಎಂದು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ–3

ರವರನ್ನು ಪಾಟೀ ಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾಗಿ ಹೇಳಿಕೆಯಲ್ಲಿರುವ ಅಂಶಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ. ಫ್ರಾಸಾ–3 ರವರನ್ನು ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ನಿಪಿ–4 ಮತ್ತು 5 ಕ್ಕೆ ಪಿ.ಡಿ. ಕೋಟೆ ಬಸ್ ನಿಲ್ದಾಣದಲ್ಲಿ ಸಹಿ ಮಾಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

15. ಫ್ರಾಸಾ–4 ಗುರುಸ್ವಾಮಿ ಇವರು ಸ್ಥಳ ಮತ್ತು ಅಮಾನತ್ತು ಪಂಚನಾಮೆ ಸಾಕ್ಷಿದಾರರಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ–4 ಮತ್ತು 5 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ತನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ ಹಾಗೂ ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ನಿಪಿ–4 ಮತ್ತು 5 ರಲ್ಲಿರುವ ವಿಚಾರಗಳು ತನಗೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ–4 ರವರನ್ನು ಪಾಟೀ ಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾಗಿ ಪಂಚನಾಮೆ ಮತ್ತು ಅಮಾನತ್ತು ಪಂಚನಾಮೆಗಳಲ್ಲಿರುವ ಅಂಶಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ.

16. ಫ್ರಾಸಾ–5 ಮಧು ಇವರು ಸ್ಥಳ ಮತ್ತು ಅಮಾನತ್ತು ಪಂಚನಾಮೆ ಸಾಕ್ಷಿದಾರರಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ–4 ಮತ್ತು 5 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ತನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ ಹಾಗೂ ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ನಿಪಿ–4 ಮತ್ತು 5 ರಲ್ಲಿರುವ ವಿಚಾರಗಳು ತನಗೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ–5 ರವರನ್ನು ಪಾಟೀ ಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾಗಿ ಪಂಚನಾಮೆ ಮತ್ತು ಅಮಾನತ್ತು ಪಂಚನಾಮೆಗಳಲ್ಲಿರುವ ಅಂಶಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ.

17. ಫ್ರಾಸಾ–6 ಸಿದಾರ್ಥ್ ರವರು ಪ್ರತ್ಯಕ್ಷ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಮೃತ ಶಿವಮೂರ್ತಿ ಅವರು ಗೊತ್ತು. ಅವರು ಅಪಘಾತದಲ್ಲಿ

ಮೃತಪಟ್ಟಿರುತ್ತಾರೆ. ಆರೋಪಿಯ ಪರಿಚಯ ಇದೆ. ಚಾಸಾ-1 ಮತ್ತು 2 ರವರ ಪರಿಚಯ ಇಲ್ಲ. ಚಾಸಾ-3 ತನ್ನ ಅಜ್ಜಿ , ಅಪಘಾತ ಹೇಗೆ ಆಯಿತು, ಯಾರ ತಪ್ಪಿನಿಂದ ಆಯಿತು ಎಂದು ತನಗೆ ಗೊತ್ತಿಲ್ಲ. ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ-6 ರವರನ್ನು ಪಾಟೀ ಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದ ಅಂಶಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ.

18. ಫ್ರಾಸಾ-7 ರಂಗಸ್ವಾಮಿ ರವರು ಪ್ರತ್ಯಕ್ಷ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಮೃತ ಶಿವಮೂರ್ತಿ ಅವರು ತನಗೆ ಗೊತ್ತಿಲ್ಲ. ಆರೋಪಿಯ ಪರಿಚಯ ಇಲ್ಲ. ಅಪಘಾತ ಹೇಗೆ ಆಯಿತು, ಯಾರ ತಪ್ಪಿನಿಂದ ಆಯಿತು ಎಂದು ತನಗೆ ಗೊತ್ತಿಲ್ಲ. ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಆರೋಪಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ-6 ರವರನ್ನು ಪಾಟೀ ಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದ ಅಂಶಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ.

19. ಫ್ರಾಸಾ-10 ರಂಗನಾಥ. ಕೆ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಪಘಾತವು 2022 ರಲ್ಲಿ ನಡೆದಿದ್ದು, ಹಲವಾರು ಜನ ಇದ್ದರು, ಅದರಲ್ಲಿ ಒಬ್ಬರು ಹೇಳಿದಂತೆ ತಾನು ನಿಪಿ-3 ನ್ನು ಬರೆದಿದ್ದೇನೆ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ-10 ರವರನ್ನು ಪಾಟೀ ಸವಾಲು ಮಾಡಿದಾಗ ದಿನಾಂಕಃ19.05.2022 ರಂದು ಚಾಸಾ-1 ರವರು ಹೇಳಿದಂತೆ ನಿಪಿ-3 ದೂರನ್ನು ಬರೆದಿದ್ದೇನೆ. ಅರೋಪಿತರ ಪರ ವಕೀಲರ ಪಾಟೀ ಸವಾಲಿನಲ್ಲಿ ನಿಪಿ-3 ರಲ್ಲಿರುವ ವಿಚಾರ ನನಗೆ ಗೋತ್ತಿಲ್ಲ ಮತ್ತು ನಿಪಿ-3 ನ್ನು ಬರೆಯಲು ಯಾರು ಮಾಹಿತಿ ಕೊಟ್ಟರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ.

20. ಫ್ರಾಸಾ–8 ರಾಘವೇಂದ್ರ ಕೆ.ಆರ್. ಮತ್ತು ಫ್ರಾಸಾ–9 ಜೆ. ರೆಹಮತ್ ಉಲ್ಲಾ ಇವರುಗಳು ಪೋಲಿಸ್ ಅಧಿಕಾರಿ/ತನಿಖಾಧಿಕಾರಿಗಳಿದ್ದು ಸದರಿಯವರು ತಮ್ಮ ತಮ್ಮ ತನಿಖೆಗೆ ಅನುಗುಣವಾಗಿ ಸಾಕ್ಷ್ಯ ನುಡಿದಿರುತ್ತಾರೆ.

21. ಅಭಿಯೋಜನೆಯು ವಿಚಾರಣೆಗೊಳಪಡಿಸಿಕೊಂಡಿರುವ ಎಲ್ಲಾ ಸಾಕ್ಷಿದಾರರ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಫ್ರಾಸಾ–3 ರವರು ಈ ಪ್ರಕರಣದ ದೂರುದಾರರಾಗಿದ್ದು, ಫ್ರಾಸಾ–2, 6 ಮತ್ತು 7 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು. ಅಪಘಾತದ ಪ್ರಕರಣಗಳಲ್ಲಿ ಮೂಲಭೂತ ಅಂಶಗಳಾದ ಆರೋಪಿಯ ಗುರುತಿಸಿರುವಿಕೆ ಮತ್ತು ಅಪಘಾತಕ್ಕೊಳಗಾದ ವಾಹನಗಳ ಪಾಲ್ಗೋಳ್ಳುವಿಕೆಯನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸಬೇಕಾಗುತ್ತದೆ.

22. ಈ ಪ್ರಕರಣದ ದೂರುದಾರರಾದ ಫ್ರಾಸಾ–3 ರವರು ತಾನು ಪೋಲೀಸ ಠಾಣೆಗೆ ಹೋಗುವಷ್ಟರಲ್ಲಿ ನಿಪಿ–3 ದೂರನ್ನು ಬರೆಯಲಾಗಿತ್ತು ಎಂದು ನುಡಿದಿದ್ದಾರೆ. ನಿಪಿ–3 ನ್ನು ಬರೆದುಕೊಟ್ಟಿರುವ ಫ್ರಾಸಾ–10 ರವರು ತಾನು ಯಾರ ಹೇಳಿಕೆ ಮೇರೆಗೆ ದೂರನ್ನು ಬರೆದಿದ್ದೇನೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ ಎಂದು ನುಡಿದಿದ್ದು ನಿಪಿ–3 ದೂರಿನಲ್ಲಿರುವ ಅಂಶಗಳು ಸಂಶಯಾತ್ಮಕವಾಗಿ ಕಂಡುಬರುತ್ತದೆ. ಫ್ರಾಸಾ–3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ–4 ಸ್ಥಳ ಪಂಚನಾಮೆ ಮತ್ತು ನಿಪಿ–5 ಕಚ್ಚಾ ನಕಾಶೆಗೆ ಅಪಘಾತವಾದ ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದು ನುಡಿದಿದ್ದು ಮತ್ತು ತಮ್ಮ ಸಮಕ್ಷಮ ಯಾವುದೇ ವಾಹನಗಳನ್ನು ಅಮಾನತು ಪಡಿಸಿಕೊಂಡಿಲ್ಲ ಎಂದು ನುಡಿದಿದ್ದಾರೆ. ಅಲ್ಲದೆ ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ನಿಪಿ–4 ಮತ್ತು 5 ಕ್ಕೆ ತಾನು ಪಿ.ಡಿ ಕೋಟೆ ಬಸ್ ನಿಲ್ದಾಣದಲ್ಲಿ ಸಹಿ ಮಾಡಿದ್ದೇನೆ ಎಂದು ನುಡಿದಿದ್ದಾರೆ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶಗಳೆನೆಂದರೆ, ಸ್ಥಳ ಮತ್ತು ಅಮಾನತು ಪಂಚನಾಮೆ ಸಾಕ್ಷಿದಾರರಾದ ಫ್ರಾಸಾ–4 ಮತ್ತು 5 ರವರು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು ಪಾಟೀ ಸವಾಲಿನಲ್ಲಿ ಸಹ ಅಭಿಯೋಜನೆಗೆ ಪೂರಕವಾಗುವ ಯಾವುದೇ ಅಂಶಗಳನ್ನು ನುಡಿದಿರುವುದಿಲ್ಲ ಆದ್ದರಿಂದ ನಿಪಿ–4 ಮತ್ತು 5 ರಲ್ಲಿರುವ ಅಂಶಗಳನ್ನು ಅಭಿಯೋಜನೆಯು ಸಾಭೀತುಪಡಿಸಿರುವುದಿಲ್ಲ. ಹೀಗೆ ಈ ಅಪಘಾತದಲ್ಲಿ ಕೆಎ–02–ಇಹೆಚ್–4137 ಮತ್ತು ಕೆಎ–16–ಎಕ್ಸ್–5862 ವಾಹನಗಳು

ಭಾಗಿಯಾಗಿವೆ ಎಂಬ ಮೂಲಭೂತ ಅಂಶಗಳನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಭೀತುಪಡಿಸುವಲ್ಲಿ ವಿಫಲವಾಗಿದೆ ಎಂದು ಈ ನ್ಯಾಯಾಲಯು ಅಭಿಪ್ರಾಯ ಪಡುತ್ತದೆ.

23. ದೂರುದಾರರಾದ ಫ್ರಾಸಾ-3 ರವರು 1 ನೇ ಆರೋಪಿಯನ್ನು ನ್ಯಾಯಾಲಯದಲ್ಲಿ ಗುರುತಿಸಿರುತ್ತಾರೆ ಆದರೆ ಇವರು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಎಂಬುದು ನಿರ್ವಿವಾದ ಸಂಗತಿ. ಆದ್ದರಿಂದ 1 ನೇ ಆರೋಪಿತನೆ ಅಪಘಾತದ ದಿನ ಕೆಎ-02-ಇಹೆಚ್-4137 ಮೋಟಾರ್ ಸೈಕಲನ್ನು ಚಾಲನೆ ಮಾಡುತ್ತಿದ್ದರು ಎಂದು ತಿರ್ಮಾನಿಸಲು ಸಾಧ್ಯವಿಲ್ಲ. ಅಲ್ಲದೆ ಈ ಪ್ರಕರಣದ ಪ್ರಮುಖ ಪ್ರತ್ಯಕ್ಷ ಸಾಕ್ಷಿದಾರರು ಮತ್ತು ಗಾಯಳುಗಳಾದ ಫ್ರಾಸಾ-2, 6 ಹಾಗೂ 7 ರವರು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು ಅಪಘಾತದ ದಿನ 1 ನೇ ಆರೋಪಿತನೆ ಕೆಎ-02-ಇಹೆಚ್-4137 ನೇ ಮೋಟಾರ್ ಸೈಕಲನ್ನು ಚಾಲನೆ ಮಾಡುತ್ತಿದ್ದನು ಎಂಬ ಅಭಿಯೋಜನೆಯ ಸೂಚನೆಯನ್ನು ಪಾಟೀ ಸವಾಲಿನಲ್ಲಿ ಸ್ಪಷ್ಟವಾಗಿ ಅಲ್ಲಗಳೆದಿರುತ್ತಾರೆ. ಹೀಗಿರುವಾಗ 1 ನೇ ಆರೋಪಿತನೆ ಸದರಿ ಮೋಟಾರ್ ಸೈಕಲನ್ನು ಅಪಘಾತದ ದಿನ ಚಾಲನೆ ಮಾಡುತ್ತಿದ್ದನು ಎಂದು ಅಭಿಯೋಜನೆಯು ನಿಸ್ಸಂಶಯವಾಗಿ ಸಾಭೀತು ಪಡಿಸುವಲ್ಲಿ ವಿಫಲವಾಗಿರುತ್ತದೆ. ಒಂದು ವೇಳೆ 1 ನೇ ಆರೋಪಿತನೆ ಸದರಿ ಮೋಟಾರ್ ಸೈಕಲ್‌ನಲ್ಲಿ ಅಪಘಾತದ ಸಮಯದಲ್ಲಿ ಚಾಲನೆ ಮಾಡುತ್ತಿದ್ದನು ಎಂದು ಭಾವಿಸಿದರೂ, 1 ನೇ ಆರೋಪಿತನ ತಪ್ಪಿನಿಂದಲೇ ಅಪಘಾತವಾಗಿದೆ ಎಂದು ತೋರಿಸುವ ಯಾವುದೇ ನಂಬಲರ್ಹ ಮತ್ತು ದೃಢವಾದ ಯಾವುದೇ ಸಾಕ್ಷ್ಯವನ್ನು ಅಭಿಯೋಜನೆಯು ಒದಗಿಸಿರುವುದಿಲ್ಲ.

24. ಅಭಿಯೋಜನೆಯ ಪ್ರಕಾರ 1 ನೇ ಆರೋಪಿ ಚಾಲನೆ ಮಾಡುತ್ತಿದ್ದ ಮೋಟಾರ್ ಸೈಕಲ್ 2 ನೇ ಆರೋಪಿತನಿಗೆ ಸೇರಿದ್ದಾಗಿದ್ದು, ಸದರಿ ಮೋಟಾರ್ ಸೈಕಲ್ ವಿಮೆ ಮತ್ತು 1 ನೇ ಆರೋಪಿತನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಎಂಬುದಾಗಿದೆ. ಆದರೆ ಕೆಎ-02-ಇಹೆಚ್-4137 ನೇ ಮೋಟಾರ್ ಸೈಕಲ್‌ನ ಮಾಲೀಕ 2 ನೇ ಆರೋಪಿ ಎಂದು ರುಜುವಾತುಪಡಿಸಲು ಅಭಿಯೋಜನೆಯು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಹೀಗಿರುವಾಗ ಅಪಘಾತದ ಸಮಯದಲ್ಲಿ 2 ನೇ ಆರೋಪಿತನೆ ಸದರಿ ಮೋಟಾರ್ ಸೈಕಲನ ಮಾಲೀಕನಾಗಿದ್ದರು ಎಂದು ತೀರ್ಮಾನಿಸಲು ಸಾಧ್ಯವಿಲ್ಲ. ಹೀಗೆ ಸದರಿ ಮೋಟಾರ್ ಸೈಕಲ್ ಮತ್ತು 1 ನೇ ಆರೋಪಿತ ಈ ಅಪಘಾತ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ

ಎಂಬ ಅಂಶವನ್ನು ರುಜುವಾತುಪಡಿಸುವಲ್ಲಿ ಅಭಿಯೋಜನೆಯು ಸಂಪೂರ್ಣವಾಗಿ ವಿಫವಾಗಿರುವುದರಿಂದ, ಸದರಿ ಮೋಟಾರ್ ಸೈಕಲ್‌ಗೆ ವಿಮೆ ಮತ್ತು 1 ನೇ ಆರೋಪಿಗೆ ಚಾಲನಾ ಪರವಾನಿಗೆ ಇರಲಿಲ್ಲ ಎಂಬ ಸಂಗತಿಗಳು ನಿರುಪಯುಕ್ತವಾಗುತ್ತವೆ.

25. ಹೀಗಾಗಿ ಕೇವಲ ತನಿಖಾಧಿಕಾರಿಗಳಾದ ಪ್ರಾಸಾ-8 ಮತ್ತು 9 ರವರ ಸಾಕ್ಷ್ಯದಿಂದ ಆರೋಪಿತರ ಮೇಲಿನ ಅರೋಪವು ಸಾಭೀತು ಆಗುವುದಿಲ್ಲ. ಅಪರಾಧ ಪ್ರಕರಣದಲ್ಲಿ, ಆರೋಪವನ್ನು ಸಂಶಯಾತೀತವಾಗಿ ಸಾಬೀತುಪಡಿಸುವ ಹೊಣೆ ಅಭಿಯೋಜನೆಯ ಮೇಲಿರುತ್ತದೆ. ಈ ಪ್ರಕರಣದಲ್ಲಿ ಅಭಿಯೋಜನೆಯು 1 ಮತ್ತು 2 ನೇ ಆರೋಪಿತರ ವಿರುದ್ಧದ ಆರೋಪಗಳನ್ನು ಸಂಶಯಾತೀತವಾಗಿ ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲವಾಗಿದೆ ಎಂದು ಈ ನ್ಯಾಯಾಲಯವು ಅಭಿಪ್ರಾಯ ಪಡುತ್ತದೆ. ಆದ್ದರಿಂದ 1 ಮತ್ತು 2 ನೇ ಆರೋಪಿತರು ಸಂಶಯದ ಲಾಭಕ್ಕೆ ಅರ್ಹರಾಗುತ್ತಾರೆ. ಆದ್ದರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಿದ ದೋಷಮುಕ್ತಗೊಳಿಸಿ ಬಿಡುಗಡೆ ಮಾಡುವುದು ಸಮಂಜಸವೆಂದು ಈ ನ್ಯಾಯಾಲಯ ಅಭಿಪ್ರಾಯಕ್ಕೆ ಬರುತ್ತದೆ. ಆದಕಾರಣ, ಮೇಲಿನ ಅಂಶ 1 ರಿಂದ 6 ನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

26. **ಅಂಶ ನಂ.7**:- ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದಾಗಿ ಈ ಕೆಳಕಂಡತೆ ಆದೇಶಿಸಲಾಗಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಉಪಯೋಗಿಸಿ ಕೊಂಡು ಆರೋಪಿತರನ್ನು ಭಾ. ದಂ.ಸಂ. ಕಲಂ 279 337 ಮತ್ತು 304A ಹಾಗೂ ಮೋಟಾರ್ ವಾಹನಗಳ ಕಾಯ್ದೆ ಕಲಂಃ3 ಸಹಕಲಂಃ181, ಕಲಂಃ146 ಸಹ ಕಲಂಃ196 ಹಾಗೂ ಕಲಂಃ5 ಸಹಕಲಂಃ180 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಂದ ದೋಷಮುಕ್ತ ಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರು ಹಾಗೂ ಅವರ ಜಾಮೀನುದಾರರು ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆ ಆರು ತಿಂಗಳುಗಳ ನಂತರ ರದ್ದುಗೊಳ್ಳತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೇಲೆ ಉಕ್ತಲೇಖನ ನೀಡಿ, ನಂತರ ತಿದ್ದುಪಡಿ ಮಾಡಿ ನನ್ನ ಸಹಿಯೊಂದಿಗೆ ಇಂದು ದಿನಾಂಕ 09 ನೇ ಏಪ್ರಿಲ್ 2026 ರಂದು ಮುಕ್ತ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು).

SHRIDHARA H D
Digitally signed by SHRIDHARA H D
Date: 2026.04.10 10:35:58 +0530

**(ಶ್ರೀಧರ ಹೆಚ್ ಡಿ)**
ಸಿ/ಸಿ ಅಪರ ಸಿವಿಲ್ ಮತ್ತು ಜೆ.ಎಂ.ಎಫ್. ಸಿ
ನ್ಯಾಯಾಧೀಶರು ಹಿರಿಯೂರು.

:: **ಅನುಬಂಧ** ::

1) ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳು :

ಪ್ರಾಸಾ-1 :- ಏಕಾಂತಪ್ಪ,

ಪ್ರಾಸಾ-2 :- ಕಾಟಮ್ಮ,

ಪ್ರಾಸಾ-3 :- ಸಿದ್ದೇಶ್,

ಪ್ರಾಸಾ-4 :- ಗುರುಸ್ವಾಮಿ,

ಪ್ರಾಸಾ-5 :- ಮಧು,

ಪ್ರಾಸಾ-6 :- ಸಿದ್ದಾರ್ಥ್

ಪ್ರಾಸಾ-7 :- ರಂಗಸ್ವಾಮಿಸಿ

ಪ್ರಾಸಾ-8 :- ರಾಘವೇಂದ್ರ ಕೆ. ಆರ್,

ಪ್ರಾಸಾ-9 :- ಜೆ. ರೆಹಮತ್ ಉಲ್ಲಾ,

ಪ್ರಾಸಾ-10 :- ರಂಗನಾಥ. ಕೆ

2) ಅಭಿಯೋಜನೆಯ ಪರ ಗು ರುತಿಸಿದ ದಾಖಲೆಗಳು :

ನಿಪಿ-1 :- ಪ್ರಾಸಾ-1 ರವರ ಹೇಳಿಕೆ,

ನಿಪಿ-2 :- ಪ್ರಾಸಾ-2 ರವರ ಹೇಳಿಕೆ,

| | | |
|---|---|---|
| ನಿಪಿ–3 | :– | ದೂರು, |
| ನಿಪಿ–4 | :– | ಕೃತ್ಯ ನಡೆದ ಸ್ಥಳ ಪಂಚನಾಮೆ, |
| ನಿಪಿ–5 | :– | ಕಚ್ಚಾ ನಕಾಶೆ, |
| ನಿಪಿ–6 | :– | ಫ್ರಾಸಾ–1 ರವರ ಮರು ಹೇಳಿಕೆ, |
| ನಿಪಿ–7 | :– | ಫ್ರಾಸಾ–6 ರವರ ಹೇಳಿಕೆ, |
| ನಿಪಿ–8 | :– | ಫ್ರಾಸಾ–7 ರವರ ಹೇಳಿಕೆ, |
| ನಿಪಿ–9 | :– | ಶವ ತನಿಖಾ ವರದಿ, |
| ನಿಪಿ–10 | :– | ಶವ ಪರೀಕ್ಷಾ ವರದಿ, |
| ನಿಪಿ–11 | :– | ಐ.ಎಂ.ವಿ ವರದಿ, |
| ನಿಪಿ–12 ರಿಂದ 15 | :– | ಗಾಯಾದ ಪ್ರಮಾಣ ಪತ್ರಗಳು, |
| ನಿಪಿ–16 | :– | ಮಾಲು ಪಟ್ಟಿ |
| ನಿಪಿ–17 | :– | ಇಂಡೆಮ್ನಿಟಿ |
| ನಿಪಿ–18 | :– | ಕಲಂಃ 133 ರಡಿಯಲ್ಲಿ ಪೊಲೀಸ್ ನೋಟೀಸ್, |
| ನಿಪಿ–19 | :– | ಕಲಂಃ 133 ರಡಿಯಲ್ಲಿ ಪೊಲೀಸ್ ನೋಟೀಸ್ ಗೆ ಉತ್ತರ, |
| ನಿಪಿ–20 | :– | ಪ್ರಥಮ ವರ್ತಮಾನ ವರದಿ, |

3) ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆಮಾಲುಗಳು :

---------ಇರುವುದಿಲ್ಲ---------------

4) ಆರೋಪಿ ಪರ ವಿಚಾರಣೆ ಮಾಡಿದ ಸಾಕ್ಷಿಗಳು ಮತ್ತು ದಾಖಲೆಗಳು

--------------ಇರುವುದಿಲ್ಲ------------

SHRIDHARA H D
Digitally signed by SHRIDHARA H D
Date: 2026.04.10 10:36:05 +0530

ಸಿ/ಸಿ ಅಪರ ಸಿವಿಲ್ ಮತ್ತು ಜೆ.ಎಂ.ಎಫ್. ಸಿ

ನ್ಯಾಯಾಧೀಶರು ಹಿರಿಯೂರು.